# ನಾಯಕಿಗೆ ಅಂತಹ ಕುರೂಪ

## ಮೌನ ಗುಡ್ಡೆಮನೆ
## ಕಲರ್ಸ್ ಕನ್ನಡ 'ರಾಮಾಚಾರಿ' ಚಾರುಲತಾ



◆ **ನಾಯಕಿ ಬೋಳಾಗಿ ಕಾಣಿಸಿಕೊಳ್ಳುವ ಪಾತ್ರದ ಸವಾಲು ಹೇಗಿತ್ತು?**

ಚಾರು ಎಂದು ಕರೆಯುತ್ತಾರೆ. ಇದುವರೆಗೂ ಸವಾಲಿನಿಂದಲೇ ಈ ಪಾತ್ರವನ್ನು ಎದುರಿಸಿದ್ದೇನೆ. ಸಾಮಾನ್ಯವಾಗಿ ಧಾರಾವಾಹಿಯಲ್ಲಿ ನಾಯಕಿಯನ್ನು ನೆಗೆಟಿವ್ ರೂಪದಲ್ಲಿ ಚಿತ್ರಿಸುವುದಿಲ್ಲ. ಬೋಲ್ಡ್ ಆಗಿರುವ ಅಹಮಿಕೆ ಪ್ರದರ್ಶಿಸುವ ಗುಣದವಳು ಚಾರು. ರ್‍ಯಾಶ್ ಅಂಡ್ ಬೋಲ್ಡ್ ಆಕೆ ಮಾಡರ್ನ್ ಡ್ರೆಸ್ ಹಾಕುತ್ತಾಳೆ. ಅದು ಕೂಡ ಭಿನ್ನ ಪ್ರಯೋಗ. ಏಕೆಂದರೆ, ನಾಯಕಿಯನ್ನು ವೀಕ್ಷಕರು ತಮ್ಮ ಮನೆ ಮಗಳಂತೆ ನೋಡಬೇಕು. ಅದಕ್ಕೆ ಅವಳ ಉಡುಗೆ ತೊಡುಗೆ, ನಡೆ ನುಡಿಯಲ್ಲಿ ಮುಗ್ಧತೆಯನ್ನು ಇರುವಂತೆ ಚಿತ್ರಿಸುವುದು ಹೆಚ್ಚು. ಈ ಆ ವಿಷಯದಲ್ಲಿ ಚಾರು ವಿರುದ್ಧ. ರಾಮಾಚಾರಿ ಪ್ರೀತಿ ಮಾಡುವ ಸಂದರ್ಭದಲ್ಲಿ ಕುರುಡಿಯ ವೇಷ ಹಾಕಿದ್ದೆ. ಪ್ರೀತಿಗಾಗಿ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಳ್ಳುವುದೂ ವಿಶೇಷ. ನನ್ನ ಕೈಯಿಂದ ಸತ್ಯನಾರಾಯಣ ಪೂಜೆ ಮಾಡಿಸಿದ್ದಾರೆ. ಮಂತ್ರವನ್ನು ಪಠಿಸಿದ್ದೇನೆ. ಉರುಳು ಸೇವೆ ಮಾಡಿದ್ದು, ಅದೆಲ್ಲಕ್ಕಿಂತ ದೊಡ್ಡ ಸಾಹಸ ಮಾಡಿದ್ದು ಎಂದರೆ ಬಾಲ್ಡ್ ವೇಷ. ಹೀಗೆ ಮಾಡಬೇಕು ಎಂದ ತಕ್ಷಣ ಹಿಂದೆ ಮುಂದೆ ಯೋಚನೆ ಮಾಡಲಿಲ್ಲ. ಸಿನಿಮಾ ಮಾಡುತ್ತಿರುವುದರಿಂದ ಆ ಬಗ್ಗೆ ಕೂಡ ಯೋಚಿಸಬೇಕಿತ್ತು. ನಿಜಕ್ಕೂ ಮಂಡೆ ಬೋಳಿಸುತ್ತೇನೆ. ಆದರೆ ಸಿನಿಮಾ ಇದೆ ಎಂದಿದ್ದೆ. ನಂತರ ಮೇಕಪ್ ಮಾಡುವುದಾಗಿ ಹೇಳಿದರು. ಈ ಮೇಕಪ್ ಜನ ಒಪ್ಪುತ್ತಾರೋ ಹೇಗೋ ಅನ್ನೋ ಭಯ ಇತ್ತು. ಇದೇ ಮೊದಲ ಸಾಹಸ ಮಾಡಿದ್ದೇವೆ ಎಂದು ಅನ್ನಿಸುತ್ತದೆ. ಮೇಕಪ್ ಮಾಡಿ ವಿಗ್ ಹಾಕಿದ ಮೇಲೆ ಭರವಸೆ ಮೂಡಿತು. ಅದಕ್ಕಾಗಿ ಬಾಬ್‌ಕಟ್ ಮಾಡಿಸಿದೆ.

◆ **ಹೊಸ ವೇಷಕ್ಕೆ ಪ್ರತಿಕ್ರಿಯೆ ಹೇಗಿತ್ತು?**

ಈ ಮೇಕಪ್ ಕುತೂಹಲವನ್ನು ಹುಟ್ಟಿಸಿತ್ತು. ಇದನ್ನು ನಮ್ಮ ತಂಡದಲ್ಲಿಯೇ ಎಲ್ಲರಿಗೂ ಗೊತ್ತಾಗದಂತೆ ದಿಢೀರೆಂದು ಅಚ್ಚರಿಯನ್ನು ಮೂಡಿಸಲಾಗಿತ್ತು. ಚಿತ್ರೀಕರಿಸಲು ಮೊದಲು ಖಾಸಗಿಯಾಗಿ ಟ್ರಯಲ್ ಮಾಡಿದ್ದರು. ತಂತ್ರಜ್ಞರು ಕೂಡ ಈ ರೀತಿ ನೋಡಲು ಮನಸು ಒಪ್ಪುವುದಿಲ್ಲ ಎಂದರು. ನನ್ನ ತಾಯಿ ಬೇಡ ಅನ್ನು ಎಂದಿದ್ದರು. ನಿಜವಾಗಿಯೂ ತಲೆ ಬೋಳಿಸುವುದಾಗಿ ಹೇಳಿದ್ದೆ. ಮೊದಲ ಪ್ರಸಾರ ನೋಡಿದಾಗ ನನ್ನ ಕಣ್ಣಲ್ಲಿ ನೀರು ಬಂತು. ವೀಕ್ಷಕರ ವಲಯದಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಇದುವರೆಗೆ ಯಾವ ನಾಯಕಿಯ ಮೇಲೆ ಇಂತಹ ಪ್ರಯೋಗವನ್ನು ಮಾಡಿರಲಿಲ್ಲ. ಸೌಂದರ್ಯ ಮೀಮಾಂಸೆಯನ್ನು ದೂರ ಇಟ್ಟು ಈ ವೇಷವನ್ನು ಹಾಕಲಾಗಿತ್ತು. ಕೆಲವರು ತಮಾಷೆ ಮಾಡುತ್ತಿದ್ದರು. ಅದನ್ನು ಪಾಸಿಟಿವ್ ಆಗಿ ತೆಗೆದುಕೊಂಡೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಅನೇಕರು ಫೋನ್ ಮಾಡಿ ಅಭಿನಂದಿಸಿದರು. ನನಗೂ ಇಷ್ಟ ಆಯಿತು.

◆ **ಮೇಕಪ್ ಸಂದರ್ಭ ಹೇಗಿತ್ತು? ಅದಕ್ಕೆ ಎಷ್ಟು ಹೊತ್ತು ಹಿಡಿಯುತ್ತಿತ್ತು?**

ಅದು ಸಂಕೀರ್ಣ ಸಂದರ್ಭ. ಮೇಕಪ್ಪಿಗೆ ಒಟ್ಟು ಮೂರು ಗಂಟೆ ಬೇಕಿತ್ತು. ಶೂಟಿಂಗ್ ಮನೆಗೆ ಎಲ್ಲರಿಗಿಂತ ಮೊದಲು ಹೋಗಿರುತ್ತಿದ್ದೆ. ಆ ಸಮಯಕ್ಕೆ ಇಬ್ಬರು ಮೇಕಪ್ ಕಲಾವಿದರು ಬಂದಿರುತ್ತಿದ್ದರು. ಮೊದಲು ರಾಸಾಯನಿಕವನ್ನು ಹಾಕುತ್ತಿದ್ದರು. ನಂತರ ಗಮ್ ಹಚ್ಚಿ ಅಂಟಿಸಲು ಒಂದೂವರೆ ಗಂಟೆ ಆಗುತ್ತಿತ್ತು. ಆಮೇಲೆ ವಿಗ್ ತೊಡಿಸಿ ಮುಖಕ್ಕೆ ಮ್ಯಾಚ್ ಮಾಡುವ ಹೊತ್ತಿಗೆ ಮೂರುಗಂಟೆ ಕಳೆಯುತ್ತಿತ್ತು. ಆ ಮೇಕಪ್ಪಿಗೆ ಮೂರು ನಾಲ್ಕು ಗಂಟೆ ವಾಯಿದೆ ನೀಡಿದರು. ಬೆವರು ಬಂದಂತೆ ಗಮ್ ಓಪನ್ ಆಗುತ್ತೆ ಅಂದಿದ್ದರು. ಮೊದಲ ದಿನ ಸ್ವಲ್ಪ ಹೊತ್ತು ಇದ್ದಿದ್ದರಿಂದ ತೊಂದರೆ ಆಗಲಿಲ್ಲ. ಎರಡನೇ ದಿನ ರಾತ್ರಿ ತನಕ ಚಿತ್ರೀಕರಣ ಆಗುತ್ತಿತ್ತು. ಅವತ್ತು ತಲೆ ನೀರುನೀರಾಗಿತ್ತು. ಮೆತ್ತಗೆ ಅನ್ನಿಸುತ್ತಿತ್ತು. ದ್ರಾವಣ ಸೋರಲು ಶುರುವಾಯಿತು. ತಲೆ ಮುಟ್ಟುವಂತಿಲ್ಲ. ನಾನು ಉಗುರು ಬೇರೆ ಶೇಪ್ ಕೊಟ್ಟು ಶಾರ್ಪ್ ಮಾಡಿಕೊಂಡಿದ್ದೇನೆ. ತಲೆಯಲ್ಲಿ ಗುಳುಗುಳು ಅನ್ನಿಸಿದರೂ ಕೆರೆದುಕೊಳ್ಳದೆ ಕಿರಿಕಿರಿ ಅನುಭವಿಸಬೇಕು. ಏನಾದರೂ ಕೆರೆದುಕೊಂಡರೆ ಅದು ಓಪನ್ ಆಗುತ್ತೆ. ನಂತರ ಮತ್ತೆ ಹೊಸದಾಗಿ ಮೇಕಪ್ ಮಾಡಬೇಕಿತ್ತು. ಒಟ್ಟಾರೆ ತುಂಬ ನಾಜೂಕಾಗಿ ನಿರ್ವಹಣೆ ಮಾಡಿದೆವು.

◆ **ಸಿನಿಮಾ ಮತ್ತು ಧಾರಾವಾಹಿಗೆ ಸಮಯವನ್ನು ಹೇಗೆ ನಿಭಾಯಿಸಿದಿರಿ?**

ನನಗೆ ಖಾಸಗಿ ಸಮಯ ಇಲ್ಲದಂತಾಗಿದೆ. ನನ್ನ ಜೊತೆ ತಂಗಿ ಮತ್ತು ಅಮ್ಮ ಇದ್ದಾರೆ. ಅವರ ಜೊತೆ ಕಾಲ ಕಳೆಯುವುದು ಕಷ್ಟ ಆಗುತ್ತಿದೆ. ಅವರು ನಮ್ಮ ಜೊತೆ ಒಂದು ದಿನ ಇರು ಎಂದು ಹೇಳುತ್ತಿದ್ದಾರೆ. ಎರಡೂ ಕಡೆ ಸಮಯ ಹೊಂದಾಣಿಕೆ ಕಷ್ಟವೇ ಆಗುತ್ತಿತ್ತು. 'ಕುಲದಲ್ಲಿ ಕೀಳಾವುದೋ' ಸಿನಿಮಾದ ಕೆಲಸ ಬಹುತೇಕ ಮುಗಿದಿದೆ. ಧಾರಾವಾಹಿ ಕಥೆ ಬದಲಾಗುತ್ತಿತ್ತು. ತಾಂತ್ರಿಕವಾಗಿ ತುಂಬ ಭಿನ್ನತೆ ಇರುತ್ತದೆ. ಸಿನಿಮಾದಲ್ಲಿ ಒಂದು ದಿನಕ್ಕೆ ಎರಡು ಸೀನ್ ತೆಗೆಯಬಹುದು. ಸೀರಿಯಲ್‌ನಲ್ಲಿ ಹತ್ತು ಹದಿನೈದು ಸೀನ್ ಮುಗಿಸುತ್ತೇವೆ. ಚಾರುವಿನದು ಮೌನಳಿಗಿಂತ ಭಿನ್ನವಾದ ಡಿಗ್ಲಾಮರ್ ಲುಕ್ ಪಾತ್ರ.

◆ **ಆರೋಗ್ಯ ಮತ್ತು ಸೌಂದರ್ಯಕ್ಕೆ ಏನು ಮಾಡುತ್ತೀರಿ?**

ಮೂರು ನಾಲ್ಕು ದಿನ ರಜೆ ಸಿಕ್ಕರೆ ಊರಿಗೆ ಕಾರು ಡ್ರೈವ್ ಮಾಡಿಕೊಂಡು ಹೋಗುತ್ತೇನೆ. ಒಂದೆರಡು ದಿನ ಅಂತ ಇದ್ದರೆ ಬೆಂಗಳೂರಿನಲ್ಲೇ ಇರುತ್ತೇನೆ. ಹೆಚ್ಚು ಮನೆ ಊಟಕ್ಕೆ ಆದ್ಯತೆ ಕೊಡುತ್ತೇನೆ. ಸೌಂದರ್ಯವರ್ಧಕ ಎಂದು ನನ್ನ ಆಯ್ಕೆಗಳಿಲ್ಲ. ಅಮ್ಮ ಕೊಟ್ಟಿದ್ದನ್ನು ಹಚ್ಚಿಕೊಳ್ಳುತ್ತೇನೆ. ನಾನ್ ವೆಜ್ ಇಷ್ಟಪಟ್ಟು ತಿನ್ನುತ್ತೇನೆ. ಏನೇ ಇದ್ದರೂ ಹೊರಗಡೆಗಿಂತ ಮನೆಯ ಊಟವೇ ಮೆಚ್ಚು. ಖಾಸಗಿಯಾಗಿ ನನಗೆ ನನ್ನ ಸಮಯ ಕೊಡಲು ಇಷ್ಟ.

■ **ರಾಘವೇಂದ್ರ ಕೆ.**